ವಿಷಯ:- ರಾಜ್ಯದಲ್ಲಿರುವ ಕಾರ್ಮಿಕರ ನ್ಯಾಯಾಲಯಗಳು.

171(370)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಕಾರ್ಮಿಕ ನ್ಯಾಯಾಲಯಗಳೆಷ್ಟು;

ಆ) ಕಾರ್ಮಿಕ ನ್ಯಾಯಾಲಯದಲ್ಲಿ ಎಷ್ಟು ಜನ ನ್ಯಾಯಾಧೀಶರ ಕೊರತೆ ಇದೆ;

ಇ) ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳೆಷ್ಟು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಯವರು):-

ಅ) 12 ಕಾರ್ಮಿಕ ನ್ಯಾಯಾಲಯಗಳು ಮತ್ತು 04 ಔದ್ಯಮಿಕ ನ್ಯಾಯಾಧೀಕರಣಗಳು

ಆ) ನಾಲ್ಕು.

ಇ) 1996ರ ಡಿಸೆಂಬರ್ ಅಂತ್ಯಕ್ಕೆ 15,341 ಪ್ರಕರಣಗಳು ಬಾಕಿ ಇವೆ.

ವಿಷಯ:- ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಕುರಿತು.

172(372)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ಕರ್ನಾಟಕ ರಾಜ್ಯದಲ್ಲಿರುವ ಲೋಕೋಪಯೋಗಿ ರಸ್ತೆಗಳೆಷ್ಟು;

2) ರಾಷ್ಟ್ರೀಯ ಹೆದ್ದಾರಿಗಳೆಷ್ಟು;

3) ಹೊಸ ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಿಸಲು ಕೇಂದ್ರದಿಂದ ಅನುಮತಿ ಬಂದಿದೆಯೇ, ರಾಷ್ಟ್ರೀಯ ಹೆದ್ದಾರಿ ದುರಸ್ತಿಗೆ ಕೇಂದ್ರದಿಂದ ಬರುವ ಅನುದಾನವೆಷ್ಟು;

4) ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಮೈಸೂರು, ನಂಜನಗೂಡು, ಚಾಮರಾಜನಗರ, ಪುಣಜೂರು ಸೇರಿದಂತೆ ಕರ್ನಾಟಕದ ಅನೇಕ ಪ್ರದೇಶಗಳನ್ನು ಒಳಗೊಂಡ ಬಹುತೇಕ ರಸ್ತೆಗಳು ಕೆಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

5) ಕರ್ನಾಟಕದಲ್ಲಿರುವ ಲೋಕೋಪಯೋಗಿ ರಸ್ತೆಗಳ ವಿಸ್ತೀರ್ಣವೆಷ್ಟು;

6) ಲೋಕೋಪಯೋಗಿ ಇಲಾಖೆಗೆ ಬರುವ ದೊಡ್ಡ ಮತ್ತು ಸಣ್ಣ ಸೇತುವೆಗಳೆಷ್ಟು;

7) ರಸ್ತೆಗಳ ದುರಸ್ತಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

1) ರಾಷ್ಟ್ರೀಯ ಹೆದ್ದಾರಿ - 1997 ಕಿ.ಮೀ. ಸಂಖ್ಯೆ 7